**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿಃ 13.03.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ K.M.T.ವಕೀಲರಿಂದ.</u>**

ಓಎಸ್ 18/2021ರ ದಾವೆಯ ತಿದ್ದುಪಡಿ ವಾದ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ 5 ಎಂದು ಗುರುತಿಸಲಾಯಿತು.

ಸದರಿ ದಾವೆಯಲ್ಲಿ ಸಲ್ಲಿಸಿದ ವಂಶವೃಕ್ಷದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ 6 ಎಂದು ಗುರುತಿಸಲಾಯಿತು.

10 ಪಹಣಿ ಪತ್ರಿಕೆಗಳ ದೃಡಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಡಿ 7 ರಿಂದ 16 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರಃ ವಾಯ್.ಆರ್.ಹಚ್. ವಕೀಲರಿಂದಃ**

ನಿ.ಡಿ 5 ರಿಂದ 16 ದಾಖಲೆಗಳು ಬಗ್ಗೆ ನನಗೆ ಗೊತ್ತಾಗಿ 3 ವರ್ಷ ಆಗಿರಬಹುದು. ಓಎಸ್ 18/2021 ರಲ್ಲಿ ನಾನು ತಕರಾರನ್ನು ಸಲ್ಲಿಸಿರುವುದಿಲ್ಲ. ನಾನು ಹಾಜರುಪಡಿಸಿದ ವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿ ದಾವೆಯನ್ನು ಅವರ ಸಹಿ ಇಲ್ಲದೆ ಅವರ ತಂದೆ ಮತ್ತು ಅವರ ಸಹೋದರರು ಮಾರಾಟ ಮಾಡಿದ್ದು ಸದರಿ ಆಸ್ತಿಯಲ್ಲಿ ಅವರಿಗೂ ಭಾಗ ಬರಬೇಕೆಂದು ದಾವಾ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಇನ್ನೂ ವಿಚಾರಣೆ ಮತ್ತು ತಿರ್ಮಾಣ ವಾಗಿಲ್ಲವೆಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳನ್ನು ಈಗಾಗಲೇ ವಾದಿ ನಿ.ಪಿ 2 ರಿಂದ 11 ರಂತೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ.

ಈ ಪ್ರಕರಣದಲ್ಲಿ ವಾದಿಯ ಭಾಗವನ್ನು ತಪ್ಪಿಸುವ ಸಲುವಾಗಿ ಈ ದಾಖಲೆಗಳನ್ನು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ

ಉದ್ದೇಶದಿಂದ ಈ ದಾಖಲೆಗಳು ಬಗ್ಗೆ ಮೊದಲೇ ಗೊತ್ತಿದ್ದರೂ ಈಗ ವಿಳಂಬ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಓಎಸ್ 81/2021 ರ ದಾವೆಯಲ್ಲಿ ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದೇವೆ ಇನ್ನು ಭಾಗ ಆಗಿಲ್ಲವೆಂದು ನನ್ನ ತಾಯಿ ಬರೆಸಿಲ್ಲವೆಂದರೆ ಸರಿ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.